# SINDHI HIGH SCHOOL, HEBBAL

**ANNUAL EXAMINATION (2025-26)**

**SUBJECT – KANNADA**

**Class: VIII** **Max Marks: 80**

**Date: 20/03/2026** **Reading Time: 15 Min**

**Number of printed sides: 7** **Writing Time: 2 Hrs. 30 Min**

---

**ಸೂಚನೆಗಳು:-**

* ಈ ಪ್ರಶ್ನೆ ಪತ್ರಿಕೆಯಲ್ಲಿ ಒಟ್ಟು 15 ಪ್ರಶ್ನೆಗಳಿರುತ್ತವೆ.
* ಈ ಪ್ರಶ್ನೆ ಪತ್ರಿಕೆಯು ಭಾಗ A ಮತ್ತು B ಎಂಬ ಎರಡು ಭಾಗಗಳನ್ನು ಮತ್ತು A B C D ನಾಲ್ಕು ವಿಭಾಗಗಳನ್ನು ಒಳಗೊಂಡಿರುತ್ತದೆ.
* ವಿಭಾಗ - A ನಲ್ಲಿ ಒಟ್ಟು 4 ಮುಖ್ಯ ಪ್ರಶ್ನೆಗಳು, 10 ಬಹು ಆಯ್ಕೆಯ ಉಪಪ್ರಶ್ನೆಗಳು ಮತ್ತು ಬರವಣಿಗೆಯ 10 ಪ್ರಶ್ನೆಗಳಿರುತ್ತವೆ.
* ಭಾಗ- A ಅನ್ವಯಿಕ ವ್ಯಾಕರಣದಲ್ಲಿ 10 ಬಹು ಆಯ್ಕೆ ಪ್ರಶ್ನೆಗಳು 5 ಬರವಣಿಗೆಯ ಪ್ರಶ್ನೆಗಳು ಮತ್ತು ಪಠ್ಯಪೂರಕದ 5 ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಬೇಕು.
* ಭಾಗ- B (ಬರವಣಿಗೆಯ ಕೌಶಲ್ಯ) ವಿಭಾಗ- C ನ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಬೇಕು.
* ಭಾಗ-B (ಪಠ್ಯಗಳ ಅಧ್ಯಯನ) ಅಲ್ಲಿನ ವಿಭಾಗ—D ಯಲ್ಲಿಯ 11 ರಿಂದ 15 ಮುಖ್ಯ ಪ್ರಶ್ನೆಗಳಿಗೆ ಅಲ್ಲಿ ಕೊಟ್ಟಿರುವ ಸೂಚನೆಯಂತೆ ಉತ್ತರಿಸಬೇಕು.

| | | |
|---|---|---|
| ಭಾಗ-A | ವಾಚನ ಮತ್ತು ಗ್ರಹಿಕಾ ಕೌಶಲ್ಯ | 20 ಅಂಕಗಳು |
| (40 ಅಂಕಗಳು) | ಅನ್ವಯಿಕ ವ್ಯಾಕರಣ | 15 ಅಂಕಗಳು |
| | ಬಹು ಆಯ್ಕೆ ಪ್ರಶ್ನೆಗಳು -ಪಠ್ಯಪೂರಕ ಅಧ್ಯಯನ | 5 ಅಂಕಗಳು |
| ಭಾಗ-B | ಬರವಣಿಗೆ ಕೌಶಲ್ಯ | 12 ಅಂಕಗಳು |
| (40 ಅಂಕಗಳು) | ಪಠ್ಯಗಳ ಅಧ್ಯಯನ | 28 ಅಂಕಗಳು |
| | ಒಟ್ಟು ಅಂಕಗಳು | 80 ಅಂಕಗಳು |

**PART-A (40 ಅಂಕಗಳು)**

**SECTION-A**

**(ವಾಚನ ಮತ್ತು ಗ್ರಹಿಕಾ ಕೌಶಲ್ಯ)=20 ಅಂಕಗಳು**

**I. ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರವನ್ನು ಆರಿಸಿ ಬರೆಯಿರಿ.**

**5x1=5**

ಸ್ವಾತಂತ್ರ್ಯ ಹೋರಾಟಗಾರರಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಹೆಸರು ಧ್ರುವ ನಕ್ಷತ್ರದಂತೆ ಅಜರಾಮರವಾಗಿದೆ. ಇವರು ೧೮೯೭ ಜನವರಿ ೨೩ರಂದು ಒರಿಸ್ಸಾದ ಕಟಕ್ ನಗರದಲ್ಲಿ ಜಾನಕಿನಾಥ್ ಬೋಸ್ ಮತ್ತು ಪ್ರಭಾವತಿ ದಂಪತಿಗಳಿಗೆ ಒಂಬತ್ತನೆಯ ಮಗನಾಗಿ ಜನಿಸಿದರು. ಇವರ ತಂದೆ ಹೆಸರಾಂತ

ವಕೀಲರಾಗಿದ್ದರು. ಸುಭಾಷರ ಮೇಲೆ ಪರಿಣಾಮ ಬೀರಿದ ವ್ಯಕ್ತಿಗಳೆಂದರೆ ಅವರ ಶಾಲೆಯ ಮುಖೋಪಾಧ್ಯಾಯರಾದ ಬೇಣಿಮಾಧವ ದಾಸ್, ಸ್ವಾಮಿ ವಿವೇಕಾನಂದ ಮೊದಲಿಗರು.

ಬೋಸರು ಭಾರತದ ಸಂಪೂರ್ಣ ಸ್ವಾತಂತ್ರ್ಯವನ್ನು ಬಲವಾಗಿ ಬೆಂಬಲಿಸಿದರು. ೧೯೪೩ರಲ್ಲಿ ಜಪಾನಿಗೆ ಹೋದರು. ಭಾರತದ ಸ್ವಾತಂತ್ರ್ಯಕ್ಕಾಗಿ ಸಹಾಯ ಕೋರಿದಾಗ ಜಪಾನ್ ಸಹಾಯ ನೀಡಲು ಒಪ್ಪಿತು. ನಂತರ ಅವರು ಐ.ಎನ್.ಎ ಅಂದರೆ ಭಾರತೀಯ ರಾಷ್ಟ್ರೀಯ ಸೇನೆಯನ್ನು ಆರಂಭಿಸಿದರು. ಜನತೆ ಅವರನ್ನು ನೇತಾಜಿಯೆಂದೇ ಕರೆಯಲು ಬಹಳ ಇಷ್ಟಪಟ್ಟಿದರು.

ಸ್ವಾತಂತ್ರ್ಯ ಹೋರಾಟದಲ್ಲಿ ಸಂಪೂರ್ಣವಾಗಿ ತೊಡಗಿಕೊಳ್ಳುವಂತೆ ಭಾರತೀಯರಿಗೆ ಬೋಸರು ಜೈ ಹಿಂದ್ ಘೋಷದ ಮೂಲಕ ಕರೆ ನೀಡಿದರು. 'ನನಗೆ ನಿಮ್ಮ ರಕ್ತ ಕೊಡಿ ನಾನು ನಿಮಗೆ ಸ್ವಾತಂತ್ರ್ಯವನ್ನು ನೀಡುತ್ತೇನೆ' ಎಂಬ ಅವರ ಕರೆಗೆ ಎಲ್ಲರೂ ಒಂದಾದರು. ಪ್ರಾರಂಭದಲ್ಲಿ ಬೋಸರು ಗಾಂಧೀಜಿಯವರ ಅನುಯಾಯಿಯಾಗಿದ್ದರು. ಗಾಂಧೀಜಿಯವರ ಅಹಿಂಸಾ ತತ್ತ್ವದಿಂದ ಬೇಸರಗೊಂಡ ಸುಭಾಷರು ಅವರಿಂದ ದೂರವಾದರು. ಬ್ರಿಟಿಷರು ಇವರನ್ನು ದೇಶದ ವಿವಿಧ ಕಾರಾಗೃಹದಲ್ಲಿ ಹನ್ನೊಂದು ಬಾರಿ ಬಂಧನಕ್ಕೊಳಪಡಿಸಿದರು. ಆದರೂ ತಮ್ಮ ಕೊನೆಯ ಉಸಿರು ನಿಲ್ಲುವವರೆಗೂ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಭಾರತಕ್ಕೆ ಬೇಕಾದ ಶಸ್ತ್ರಾಸ್ತ್ರಗಳನ್ನು ತರಲು ವಿದೇಶಕ್ಕೆ ಹೋಗಿ, ಹಿಂದಿರುಗುವ ಸಂದರ್ಭದಲ್ಲಿ ೧೮ ಆಗಸ್ಟ್ ೧೯೪೫ರಂದು ವಿಮಾನ ಅಪಘಾತದಲ್ಲಿ ನಿಧನರಾದರೆಂದು ಹೇಳಲಾಗುತ್ತದೆ. ೨೦೨೧ರಿಂದ ಭಾರತವು ನೇತಾಜಿಯವರ ಜನ್ಮ ಜಯಂತಿಯನ್ನು ಜನವರಿ ೨೩ರಂದು ಪರಾಕ್ರಮ ದಿನ ಎಂದು ಎಲ್ಲೆಡೆ ಆಚರಿಸುತ್ತದೆ. ಆದರೆ ಅವರು ಭಾರತೀಯರ ಮನದಲ್ಲಿ ಎಂದೆಂದಿಗೂ ಇರುತ್ತಾರೆ.

**ಪ್ರಶ್ನೆಗಳು:-**

1. ಭಾರತದ ಸ್ವಾತಂತ್ರ್ಯಕ್ಕಾಗಿ ಸಹಾಯ ಕೋರಿದಾಗ ಈ ದೇಶವು ಸಹಾಯ ನೀಡಲು ಒಪ್ಪಿತು.

A. ಶ್ರೀಲಂಕಾ  B. ಬಾಂಗ್ಲಾದೇಶ  C. ಜಪಾನ್  D. ಅಮೆರಿಕ

2. ಸುಭಾಷರ ಮೇಲೆ ಪ್ರಭಾವ ಬೀರಿದ ವ್ಯಕ್ತಿಗಳು ಯಾರು?

A. ಜಾನಕಿನಾಥ್ ಬೋಸ್-ಪ್ರಭಾವತಿ  B. ಭಗತ್‌ಸಿಂಗ್ -ಲಾಲ್ ಗುರು

C. ಬಂಕಿಮಚಂದ್ರ ಚಟರ್ಜಿ-ಮಹಾತ್ಮಗಾಂಧೀಜಿ  D. ಬೇಣಿಮಾಧವದಾಸ್ - ಸ್ವಾಮಿವಿವೇಕಾನಂದ

3. 'ನನಗೆ ನಿಮ್ಮ ರಕ್ತ ಕೊಡಿ ನಾನು ನಿಮಗೆ ಸ್ವಾತಂತ್ರ್ಯವನ್ನು ನೀಡುತ್ತೇನೆ' ಎಂದು ಭಾರತೀಯರಿಗೆ ಇವರ ವಿರುದ್ಧ ಬೋಸರು ಕರೆ ನೀಡಿದರು.

A. ಪೋರ್ಚುಗೀಸ್  B. ಫ್ರೆಂಚ್  C. ಯೂರೋಪಿಯನ್ಸ್  D. ಬ್ರಿಟಿಷ್

4. ಸ್ವಾತಂತ್ರ್ಯ ಹೋರಾಟಕ್ಕಾಗಿ ಬೋಸರು ಸ್ಥಾಪಿಸಿದ ಸೈನ್ಯದ ಹೆಸರೇನು?

A. ಶ್ರೀರಾಮ ಸೇನೆ  B. ಭಾರತೀಯ ರಾಷ್ಟ್ರೀಯ ಸೇನೆ  C. ಯುವಸೇನೆ  D. ಮಹಿಳಾಸೇನೆ

5. ಈ ಕೆಳಗಿನ ಹೇಳಿಕೆಗಳನ್ನು ಸರಿಯಾಗಿ ಓದಿ ಉತ್ತರ ಬರೆಯಿರಿ.

**ಹೇಳಿಕೆ:** i. ನೇತಾಜಿಯವರ ಜನ್ಮ ದಿನವನ್ನು ಪರಾಕ್ರಮ ದಿನವೆಂದು ಭಾರತದೆಲ್ಲಡೆ ಆಚರಿಸಲಾಗುತ್ತದೆ.

**ಹೇಳಿಕೆ:** ii. ಜೈ ಹಿಂದ್ ಘೋಷ ವಾಕ್ಯವು ಬೋಸ್‌ರು ಭಾರತೀಯರ ಹೋರಾಟಕ್ಕೆ ನೀಡಿದ ಕರೆಯಾಗಿತ್ತು.

A. ಮೇಲಿನ ಎರಡು ಹೇಳಿಕೆಗಳು ಸರಿಯಾಗಿವೆ.  B. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.

C. ಮೊದಲಿನ ಹೇಳಿಕೆ ಮಾತ್ರ ಸರಿಯಾಗಿದೆ.  D. ಎರಡನೆಯ ಹೇಳಿಕೆ ಮಾತ್ರ ಸರಿಯಾಗಿದೆ.

**II. ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರವನ್ನು ಆರಿಸಿ ಬರೆಯಿರಿ.**

**5x1=5**

ಕನ್ನಡ ನಾಡು ಸುಕ್ಷೇತ್ರಗಳ ಬೀಡು. ಪುಣ್ಯಕ್ಷೇತ್ರಗಳ ನೆಲೆಬೀಡು. ಇಂತಹ ಕ್ಷೇತ್ರಗಳ ಸಾಲಿನಲ್ಲಿ 'ದಕ್ಷಿಣ ಕಾಶಿ' ಎಂದೇ ಪ್ರಸಿದ್ಧವಾಗಿರುವುದು ಶಿವಗಂಗೆ. ಶಿವಗಂಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕಿನಲ್ಲಿದೆ. ಬೆಟ್ಟದ ಸುತ್ತ ಮುತ್ತಣ ಪ್ರಶಾಂತವಾದ ಹಸಿರು ಪರಿಸರವಿದೆ. ಬೆಟ್ಟವನ್ನು ನಾಲ್ಕು ದಿಕ್ಕುಗಳಿಂದ ನೋಡಿದಾಗ ನಾಲ್ಕು ರೂಪವಾಗಿ ಕಾಣುತ್ತದೆ. ಪೂರ್ವದಿಂದ ಬಸವನ ಆಕಾರವಾಗಿ, ಪಶ್ಚಿಮದ ಕಡೆಯಿಂದ ಗಣೇಶನ ಆಕಾರವಾಗಿ, ಉತ್ತರ ದಿಕ್ಕಿನಿಂದ ಸರ್ಪದ ಆಕಾರವಾಗಿ, ದಕ್ಷಿಣದ ಕಡೆಯಿಂದ ಲಿಂಗದ ಆಕಾರವಾಗಿ ಕಾಣುತ್ತದೆ.

ಶಿವಗಂಗೆ ಬೆಟ್ಟದಲ್ಲಿ ಹಲವು ಗವಿಗಳು, ತೀರ್ಥಗಳು ಇವೆ. ಇವೆಲ್ಲವೂ ನಿಸರ್ಗ ನಿರ್ಮಿತವು. ಇಲ್ಲಿ ಎಲ್ಲಾ ದೇವಾಸ್ಥಾನಗಳು ಗವಿಗಳಿಂದ ಕೂಡಿದೆ. ಇವೆಲ್ಲವೂ ಬಂಡೆಗಳಿಂದ ಸಹಜ ನಿರ್ಮಿತವಾಗಿರುವಂತಹವು. ತೀರ್ಥಗಳೆಂದರೆ ಕಣ್ವ ತೀರ್ಥ, ಪಾತಾಳಗಂಗೆ, ಒರಳುಕಲ್ಲು ತೀರ್ಥ ಇನ್ನು ಮುಂತಾದವು ಇವೆ. ಈ ಬೆಟ್ಟದ ಮಹಾದ್ವಾರದ ಪಕ್ಕದಲ್ಲಿ ಶಾಂತೇಶ್ವರ ದೇವಾಲಯವಿದೆ. ಹೊಯ್ಸಳ ವಂಶದ ಪ್ರಸಿದ್ಧ ರಾಜ ವಿಷ್ಣುವರ್ಧನನು ತನ್ನ ಪಟ್ಟದರಾಣಿ ಶಾಂತಲೆಯ ನೆನಪಿಗೆ ಈ ದೇವಸ್ಥಾನವನ್ನು ಕಟ್ಟಿಸಿದನೆಂದು ಇತಿಹಾಸ ಹೇಳುತ್ತದೆ. ಬೆಟ್ಟವನ್ನು ಹತ್ತಲು ಆರಂಭಿಸುವಾಗ ಎಡಗಡೆ ಒಂದು ಬೃಹತ್ ಗಣಪತಿ ಮೂರ್ತಿ ಇದೆ. ಯಾತ್ರಿಕರು ಬೆಟ್ಟ ಹತ್ತುವ ಮುನ್ನ ಗಣಪತಿಗೆ ಪೂಜೆ ಸಲ್ಲಿಸಿ ಬೆಟ್ಟವನ್ನು ಹತ್ತಲು ಪ್ರಾರಂಭಿಸುವರು. ಮುಂದೆ ಸಾಗಿದರೆ ನಂದಿ ಮಂಟಪ ಸಿಗುತ್ತದೆ. ಹೀಗೆ ಹೋದರೆ ದೊಡ್ಡ ಬಸವನ ವಿಗ್ರಹವಿದೆ. ಅದನ್ನು 'ಎಮ್ಮೆ ಬಸವ' ಎಂದು ಕರೆಯುತ್ತಾರೆ. ಮುಂದೆ ಹೋದರೆ ದೊಡ್ಡ ಬಾಗಿಲು ಎದುರಾಗುತ್ತದೆ. ಅದನ್ನು 'ಗಾರೆ ಬಸವ' ಬಾಗಿಲು ಎನ್ನುತ್ತಾರೆ. ಏಕೆಂದರೆ ಬಾಗಿಲ ಮೇಲೆ ಗಾರೆಯಿಂದ ಮಾಡಿದ ಬಸವನ ಮೂರ್ತಿಯಿದೆ. ಹೀಗೆ ಶಿವಗಂಗೆಯ ಬಗ್ಗೆ ತಿಳಿಯುವುದು ಬಹಳಷ್ಟು ಇದೆ.

**ಪ್ರಶ್ನೆಗಳು:-**

1. ಬೆಟ್ಟವು ಪಶ್ಚಿಮದ ಕಡೆಯಿಂದ ನೋಡಿದಾಗ ಯಾವ ಆಕಾರವಾಗಿ ಕಾಣುತ್ತದೆ?
A. ದೇವಿ B. ಲಿಂಗ C. ಕಾಲ ಭೈರವ D. ಗಣೇಶ

2. ಶಿವಗಂಗೆ ಬೆಟ್ಟವು ಯಾವ ತಾಲ್ಲೂಕಿನಲ್ಲಿದೆ?
A. ನಾಗಮಂಗಲ B. ನೆಲಮಂಗಲ C. ಕನ್ನಮಂಗಲ D. ಬೆಳವಂಗಲ

3. ಹೊಯ್ಸಳ ವಂಶದ ಪ್ರಸಿದ್ಧ ರಾಜ ಯಾರು?
A. ಇಮ್ಮಡಿ ಪುಲಕೇಶಿ B. ವಿಷ್ಣುವರ್ಧನ C. ನೃಪತುಂಗ D. ಕೃಷ್ಣದೇವರಾಯ

4. ಶಿವಗಂಗೆ ಕ್ಷೇತ್ರವೂ __________ಎಂದೇ ಪ್ರಸಿದ್ಧವಾಗಿದೆ.
A. ದಕ್ಷಿಣ ಕಾಶಿ B. ಪೂರ್ವ ಕಾಶಿ C. ಗುಪ್ತಕಾಶಿ D. ಉತ್ತರಕಾಶಿ

5. ಈ ಕೆಳಗಿನ ಹೇಳಿಕೆಗಳನ್ನು ಸರಿಯಾಗಿ ಓದಿ ಉತ್ತರ ಬರೆಯಿರಿ.
**ಹೇಳಿಕೆ**: ೧. ಶಿವಗಂಗೆ ಬೆಟ್ಟದಲ್ಲಿ ಹಲವು ಗವಿಗಳು, ತೀರ್ಥಗಳು ಇವೆ. ಇವೆಲ್ಲವೂ ನಿಸರ್ಗ ನಿರ್ಮಿತ.
**ಹೇಳಿಕೆ**: ೨. ಯಾತ್ರಿಕರು ಬೆಟ್ಟ ಹತ್ತುವ ಮುನ್ನ ಗಣಪತಿಗೆ ಪೂಜೆ ಸಲ್ಲಿಸಿ ಬೆಟ್ಟವನ್ನು ಹತ್ತಲು ಪ್ರಾರಂಭಿಸುವರು.

A. ಮೇಲಿನ ಎರಡು ಹೇಳಿಕೆಗಳು ಸರಿಯಾಗಿವೆ. B. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.
C. ಮೊದಲಿನ ಹೇಳಿಕೆ ಮಾತ್ರ ಸರಿಯಾಗಿದೆ. D. ಎರಡನೆಯ ಹೇಳಿಕೆ ಮಾತ್ರ ಸರಿಯಾಗಿದೆ

**III. ಕೆಳಗೆ ಕೊಟ್ಟಿರುವ ಹಿರೇಮಲ್ಲೂರು ಈಶ್ವರನ್ ರವರ 'ತಲಕಾಡಿನ ವೈಭವ'- ಗದ್ಯಭಾಗವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ. 5x1=5**

ಮೂರು ಮೈಲಿಗಳಾಚೆ ವಿಜಯಪುರ, ವಿಜಯಪುರದ ಅರ್ಕೇಶ್ವರನ ದರ್ಶನವೊಂದು ಮುಗಿದರೆ ತಲಕಾಡಿನ ಪಂಚಲಿಂಗಗಳ ದರ್ಶನ ಪೂರ್ತಿಯಾಗುವುದೆಂದು ನಂಬಿ ಆ ದಾರಿಯಲ್ಲಿ ನಡೆದಾಗ ಮೂಡಣ ದಿಗಂತದಲ್ಲಿ ಕಾರ್ತೀಕ ಮಾಸ ಹುಣ್ಣಿಮೆಯೆಡೆಗೆ ನಡೆದಿದ್ದ ಚಂದ್ರಮ ಮೆಲ್ಲಮೆಲ್ಲಗೆ ಮೇಲೇರುತ್ತಿದ್ದ. ದಾರಿ ಕೊರಕಲು,ಮೋಟಾರು ಓಡಲೊಲ್ಲದು, ಸಾರಥಿ ನಿಲ್ಲಿಸಲಾರ. ಹಳ್ಳವೊಂದು ಇದಿರಾಯಿತು. ಮೋಟಾರು ನಿಂತೇಬಿಟ್ಟಿತು. ಸಾರಥಿಗೆ ಹೇಳಿದೆ! ಅರ್ಕೇಶ್ವರ ದೇವಾಲಯ ಕಾಣದೆ ಹೋದರೆ ಮನಸ್ಸಿನಲ್ಲಿ ಕೊನೆಯವರೆಗೂ ಅತೃಪ್ತಿ ಉಳಿಯುತ್ತದೆ. ಏನು ಮಾಡಲಿ?

ನನ್ನ ಮನದ ಇಂಗಿತವನ್ನು ಅರಿತ ಸಾರಥಿ " ಬನ್ನಿ, ನಾವಿಬ್ಬರೂ ಮುಂದಕ್ಕೆ ಹೋಗಿ ನೋಡಿಕೊಂಡು ಬರೋಣ,ಸಿಕ್ಕರೆ ತಿರುಗಿ ಬಂದು ಇವರನ್ನು ಕರೆದುಕೊಂಡು ಹೋಗೋಣ" ಎಂದನು. ಇಬ್ಬರೂ ಹೋದೆವು. ರಾತ್ರಿ ಒಂದು ಗಂಟೆ. ಎಡಬಲಕ್ಕೆ ಶಾಲಿವನ. ನರಿಗಳು ಬಯಲಾಟದ ತಾಳಗತಿಗೆ ತಕ್ಕಂತೆ ಕೂಗುವ ಹಿಮ್ಮೇಳದವರಂತೆ ಕೂಗುತ್ತಲಿದ್ದವು. ಅನತಿ ದೂರ ಹೋಗುವಷ್ಟರಲ್ಲಿ ಗಿಡಮರಗಳ ಪೊದೆಯಲ್ಲಿ ಏನೋ ಬೆಳ್ಳಬೆಳ್ಳಗೆ,ಮಸುಕು ಮಸುಕಾಗಿ ಕಂಡಿತು. ಎದೆ ಜೋರಿನಿಂದ ಹಾರತೊಡಗಿತು. ಧಾವಿಸಿದೆವು, ಸಮೀಪಿಸಿದೆವು, ಯುರೇಕಾ!ಯುರೇಕಾ!

ಆವೇಶದಲ್ಲಿ ನನ್ನ ಯಾತ್ರಿಕರಿಗೆ ಕೇಳುವಂತೆ ಚೀರು ಧ್ವನಿಯಲ್ಲಿ " ಬನ್ರೋ ಗುಡಿ ಸಿಕ್ತು, ಬನ್ರೋ ದೇವಾಲಯ ಸಿಕ್ತು" ಎಂದು ಕೂಗಿದೆ. ಇವರೆಲ್ಲ ಬಂದರು. ನೋಡಿದೆವು! ಅರ್ಕೇಶ್ವರ ಲಿಂಗ ತಲಕಾಡಿನ ಪಂಚಲಿಂಗಕ್ಕೆ ಸೇರಿದ್ದು. ಗೋಕರ್ಣ ತೀರ್ಥದಲ್ಲಿ ಮಿಂದು ಐದು ಲಿಂಗಗಳನ್ನು ಒಂದೊಂದು ಸಾರಿ ಸಂದರ್ಶಿಸಿ ವೈದ್ಯೇಶ್ವರ ಲಿಂಗಕ್ಕೆ ವರದಿಯನ್ನೊಪ್ಪಿಸಿ ಸಂಜೆ ಮುಗಿಯುವುದರೊಳಗೆ ಪಂಚಲಿಂಗಗಳ ದರ್ಶನವನ್ನು ಪೂರೈಸಿದರೆ ಶ್ರದ್ಧಾವಂತನಾದ ಭಕ್ತನಿಗೆ ಮುಕ್ತಿ ದೊರುಯುವುದು ನಿಜ!

ನಾವೀಗ ಹೊಯ್ಸಳರ ನಾಡಿನಲ್ಲಿ ಸಂಚರಿಸುತ್ತಿದ್ದೇವೆ. ಕಪಿಲಾ ನದಿಯನ್ನು ಆ ಕಡೆಗೆ ಬಿಟ್ಟು ಈಚೆಗೆ ಉತ್ತರಾಭಿಮುಖವಾಗಿ ಹೊರಟು ಮುಂದಕ್ಕೆ ಬಂದರೆ ಹೊಯ್ಸಳ ಬಲ್ಲಾಳರ ಅಭಿಮಾನದ ಕಲಾಸಂಪದವಾಗಿ ನಿಂತಿರುವ ವಾಸ್ತುಶಿಲ್ಪ ಕಲಾರತ್ನವೊಂದನ್ನು ಕಾಣುತ್ತೇವೆ. ಅದೇ ಸೋಮನಾಥ ದೇವಾಲಯ.

**ಪ್ರಶ್ನೆಗಳು:-**

1. ತಲಕಾಡಿನ ಪಂಚಲಿಂಗ ದೇವಾಲಯಗಳಲ್ಲಿ ಯಾವ ದೇವಾಲಯವನ್ನು ನೋಡದಿದ್ದರೆ ಪರಿಪೂರ್ಣವಾಗುವುದಿಲ್ಲ ಎಂದು ಲೇಖಕರು ನಂಬಿದ್ದರು?
2. ಲೇಖಕರಿಗೆ ಶಾಲಿವನದ ಗಿಡಮರದ ಬಳಿ ಮಸುಕುಮಸುಕಾಗಿ ಬೆಳ್ಳಬೆಳ್ಳಗೆ ಕಾಣಿಸಿದಾಗ ಏನೆಂದು ಕೂಗಿಕೊಂಡರು?
3. ಮೋಟಾರು ಗಾಡಿ ಏಕೆ ನಿಂತಿತು?
4. ಹೊಯ್ಸಳ ಬಲ್ಲಾಳರು ನಿರ್ಮಿಸಿದ ಪ್ರಸಿದ್ಧ ದೇವಾಲಯ ಯಾವುದು?
5. ಲೇಖಕರು ಪಂಚಲಿಂಗಗಳ ದರ್ಶನಕ್ಕೆ ಯಾವ ಮಾಸದಲ್ಲಿ ಹೊರಟರು?

**IV. ಕೆಳಗೆ ಕೊಟ್ಟಿರುವ ಎಂ. ಎಂ. ಕಲಬುರ್ಗಿರವರು ಸಂಪಾದಿಸಿ ಪ್ರಕಟಿಸಿರುವ ಸಮಗ್ರ ವಚನ ಸಂಪುಟಗಳಿಂದ ಆಯ್ದ 'ವಚನಾಮೃತ' ಎಂಬ ಪದ್ಯವನ್ನು ಓದಿಕೊಂಡು, ಅದರ ಕೆಳಗೆ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ. 5x1=5**

ಕೃತಯುಗದಲ್ಲಿ ಶ್ರೀ ಗುರುವು ಶಿಷ್ಯಂಗೆ ಬಡಿದು ಬುದ್ಧಿಯ
ಕಲಿಸಿದರೆ, ಆಗಲಿ ಮಹಾ ಪ್ರಸಾದವೆಂದನಯ್ಯ
ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ
ಕಲಿಸಿದರೆ, ಆಗಲಿ ಮಹಾ ಪ್ರಸಾದವೆಂದನಯ್ಯ
ದ್ವಾಪರಯುಗದಲ್ಲಿ ಶ್ರೀಗುರುವು ಶಿಷ್ಯಂಗೆ ಝುಂಕಿಸಿ ಬುದ್ಧಿಯ
ಕಲಿಸಿದರೆ, ಆಗಲಿ ಮಹಾ ಪ್ರಸಾದವೆಂದನಯ್ಯ

ಕಲಿಯುಗದಲ್ಲಿ ಶ್ರೀಗುರುವು ಶಿಷ್ಯಂಗೆ ವಂದಿಸಿ ಬುದ್ಧಿಯ
ಕಲಿಸಿದರೆ, ಆಗಲಿ ಮಹಾ ಪ್ರಸಾದವೆಂದನಯ್ಯ
ಗುಹೇಶ್ವರ, ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ
ನಾ ಬೆರಗಾದೆನು. - - ಅಲ್ಲಮಪ್ರಭು

ಕಾಯಕದಲ್ಲಿ ನಿರತನಾಡೆ
ಗುರುದರ್ಶನವಾದಡೂ ಮರೆಯಬೇಕು;
ಲಿಂಗಪೂಜೆಯಾದಡೂ ಮರೆಯಬೇಕು
ಜಂಗಮಪೂಜೆಯಾದಡೂ ಹಂಗ ಹರಿಯಬೇಕು
ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು - ಆಯ್ದಕ್ಕಿ ಮಾರಯ್ಯ

**ಪ್ರಶ್ನೆಗಳು:-**

1. ಕಲಿಯುಗದಲ್ಲಿ ಗುರುವು ಶಿಷ್ಯನಿಗೆ ಹೇಗೆ ಬುದ್ಧಿ ಹೇಳಬೇಕಿದೆ?
2. ಕಾಯಕದಲ್ಲಿ ನಿರತನಾದವನು ಯಾವುದನ್ನು ಮರೆಯಬೇಕು?
3. ಆಯ್ದಕ್ಕಿ ಮಾರಯ್ಯನ ಅಂಕಿತನಾಮವೇನು?
4. ದ್ವಾಪರಯುಗದಲ್ಲಿ ಗುರುವು ತಮ್ಮ ಶಿಷ್ಯರಿಗೆ ಹೇಗೆ ಬುದ್ಧಿಯನ್ನು ಕಲಿಸುತ್ತಿದ್ದರು?
5. ಯಾವ ಯುಗದಲ್ಲಿ ಗುರು ಶಿಷ್ಯರಿಗೆ ಬೈದು ಬುದ್ಧಿಯನ್ನು ಹೇಳುತ್ತಿದ್ದರು?

## SECTION-B

## (ಅನ್ವಯಿಕ ವ್ಯಾಕರಣ ಮತ್ತು ಪಠ್ಯಪೂರಕ ಅಧ್ಯಯನ)=20 ಅಂಕಗಳು

**V. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರವನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.** **10x1=10**

1. ಕೆಳಗೆ ಕೊಟ್ಟಿರುವ ತತ್ಸಮ – ತದ್ಭವಗಳ ಸರಿಯಾದ ರೂಪವನ್ನು ಗುರುತಿಸಿ ಬರೆಯಿರಿ.
   ೧. ಕಾವ್ಯ - ಕಬ್ಬ ೨. ಜನ್ಮ- ಜನುಮ ೩. ವಿನೋದ- ವಿನದ ೪. ಅಚ್ಚರಿ- ಅಚರಿ

   A. ೧ ಮತ್ತು ೨ B. ೨ ಮತ್ತು ೪ C. ೨ ಮತ್ತು ೩ D. ೧ ಮತ್ತು ೨
2. ಕೆಳಗೆ ಕೊಟ್ಟಿರುವ ಸಂಧಿ - ಸಂಧಿ ಪದಗಳನ್ನು ಹೊಂದಿಸಿ ಬರೆಯಿರಿ.
   ೧. ಮೃಷ್ಟಾನ್ನ ಅ) ಲೋಪಸಂಧಿ
   ೨. ವೈದ್ಯೇಶ್ವರ ಆ) ವೃದ್ಧಿಸಂಧಿ
   ೩. ಐಕ್ಯೆಕ ಇ) ಸವರ್ಣದೀರ್ಘಸಂಧಿ
   ೪. ಊರಿಂದ ಈ) ಗುಣಸಂಧಿ

   A. ೧ – ಇ ೨ – ಈ ೩ - ಆ ೪ -ಅ
   B. ೧ – ಈ ೨- ಆ ೩ - ಅ ೪- ಇ
   C. ೧ – ಅ ೨ -ಆ ೩ - ಇ ೪ - ಈ
   D. ೧ – ಆ ೨ – ಅ ೩ - ಈ ೪ - ಇ

3. 'ವಿರಂಚಿ' ಈ ಪದದ ಅರ್ಥ ......
   A.ಜಂಗಮ B. ಪಟ್ಟಾಂಗ C. ಸಾರಥಿ D. ಬ್ರಹ್ಮ

4. ತಾಯಿ <u>ಮಗುವನ್ನು</u> ಹಾಸಿಗೆಯ ಮೇಲೆ ಮಲಗಿಸಿದಳು.- (ಗೆರೆಯೆಳೆದ ಪದದಲ್ಲಿರುವ ವಿಭಕ್ತಿ ತಿಳಿಸಿ)
   A. ಪ್ರಥಮಾ B. ದ್ವಿತೀಯಾ C. ತೃತೀಯಾ D. ಚತುರ್ಥಿ

5. ಭಾರತದ ಉತ್ತರಕ್ಕೆ ಹಿಮಾಲಯ ಪರ್ವತವಿದೆ.- (ಈ ವಾಕ್ಯದಲ್ಲಿರುವ ದ್ವಿಗ್ವಾಚಕ ಪದ ಗುರುತಿಸಿ)
   A. ಪರ್ವತ B. ಭಾರತದ C. ಹಿಮಾಲಯ D. ಉತ್ತರ

6. ಬೆಲೆ - ಬೆಳೆ ಈ ಪದಗಳ ಅರ್ಥವ್ಯತ್ಯಾಸ ಕ್ರಮ ಹೀಗಿದೆ.
A. ಮೌಲ್ಯ- ಫಸಲು B. ಭಯ-ಭಟ C. ಬಳಿ- ಬಲಿ D. ದನ-ಧನ

7. ತೆಂಗಿನಮರ <u>ಎತ್ತರವಾಗಿ</u> ಬೆಳೆಯುತ್ತದೆ. - (ಗೆರೆಯೆಳೆದ ಪದದ ವಿಶೇಷತೆ ಗುರುತಿಸಿ)
A. ಅನ್ವರ್ಥನಾಮ B. ರೂಢನಾಮ C. ಗುಣವಾಚಕ D. ದಿಗ್ವಾಚಕ

8. ಮನೆ : ಮಠ : : ಹಣ್ಣು: ________ (ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ)
A. ಹಕ್ಕಿ B. ಹಂಪಲು C. ಹಂಪು D. ಹಠ

9. ಶಿಲ್ಪಿಗಳು ಸುಂದರವಾದ ಗುಡಿಯನ್ನು ಕಟ್ಟಿದರು- (ಕ್ರಿಯಾಪದದ ಧಾತು ಗುರುತಿಸಿ)
A. ಕಟ್ಟಿ B. ಕಟ್ಟಿದ C. ಕಟ್ಟುವ D. ಕಟ್ಟು

10. 'ಜಂಗಮ' ಪದದ ವಿರುದ್ಧಾರ್ಥಕ ಪದ ....
A. ವಿರಕ್ತಿ B. ಸ್ಥಾವರ C. ವಿದ್ವಾಂಸ D. ಗುರು

**VI. ಕೆಳಗಿನವುಗಳನ್ನು ಸೂಚಿಸಿದಂತೆ ಬರೆಯಿರಿ. 5x1=5**

1. ಜನರು ತೇರನ್ನು ಬಹಳ ಸಡಗರದಿಂದ ಎಳೆದರು. (ಈ ವಾಕ್ಯವನ್ನು ಭವಿಷ್ಯತ್ ಕಾಲಕ್ಕೆ ಬದಲಿಸಿ)
2. ಗೆಳೆಯನು ಗಿಡವನ್ನು ಬೆಳೆಸಿದನು. (ಅನ್ಯಲಿಂಗ ರೂಪದಲ್ಲಿ ಬರೆಯಿರಿ)
3. ಅವನು ಬಹು ಬೇಗ ಊರನ್ನು ಸೇರಿದನು. (ಈ ವಾಕ್ಯವನ್ನು ಬಹುವಚನಕ್ಕೆ ಬದಲಿಸಿ)
4. ಈ ಕೆಳಗಿನ ಗಾದೆ ಮಾತಿನ ಅರ್ಥವನ್ನು ಬರೆಯಿರಿ.

   ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ: **(ಅಥವಾ)** ಅತಿಯಾಸೆ ಗತಿಕೇಡು.
5. ಆಚರಿಸು (ಈ ಪದವನ್ನು ಬಳಸಿ ಸ್ವಂತ ವಾಕ್ಯ ಮಾಡಿ)

**VII. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ. 5x1=5**

1. ಕೆಡೆನುಡಿವ, ಕೆಡೆಬಗೆವ, ಕೆಡುಕು ಜನರಿಗೆ ಕವಿಯು ಇದನ್ನು ಕೊಡುವೆನೆಂದಿದ್ದಾರೆ.
A. ವೀಳೆಯವನು B. ಶಿಕ್ಷೆಯನ್ನು C. ಬಹುಮಾನವನ್ನು D. ಮನೆಯನ್ನು

2. ಪ್ರಾರ್ಥನೆಯಿಂದ ಮಳೆಬರಿಸುವುದಾಗಿ ಹೇಳಿದ್ದು........
A. ಶಿವಬಾಲಯೋಗಿ B. ಆದಿತ್ಯನಾಥಯೋಗಿ C. ನರಸಿಂಹಯ್ಯ D. ಆಟೋಚಾಲಕ

3. ಇವೆಲ್ಲವೂ ನಮ್ಮ ಸುತ್ತಲೂ ಇರುವ ಕಂದಕಗಳು......
A. ಶ್ರೀಮಂತ-ಬಡವ B. ಜಾತಿ ಮತ C. ಉತ್ಸಾಹ-ಉದ್ವೇಗ D. ತೊಡುಕು-ಒಡಕು

4. ದೇಹಕ್ಕೆಲ್ಲಾ ನಟ್ಟು ಬೋಲ್ಟು ಹಾಕಿಸಿಕೊಳ್ಳುವುದಕ್ಕಿಂತ ________ಪಾದಾರವಿಂದವನ್ನು ಸೇರುವುದು ಲೇಸು.
A. ಭಗವಂತನ B. ಸ್ನೇಹಿತರ C. ಬಂಧುಬಳಗ D. ತಂದೆ ತಾಯಿ

5. ಕೋಟೆಗೋಡೆಗೆ ಮೆಟ್ಟಿಲುಗಳು ಯಾವುದು?
A. ದೇಹ B. ಮನುಷ್ಯ C. ಹೆಣಗಳು D. ಇಟ್ಟಿಗೆಗಳು

**PART-B (40 ಅಂಕಗಳು)**

**SECTION - C**

**ಬರವಣಿಗೆ ಕೌಶಲ್ಯ (12 ಅಂಕಗಳು)**

**VIII. ನಿಮ್ಮ ಬಡಾವಣೆಯಲ್ಲಿ 'ನೀರಿನ ಘಟಕವನ್ನು' ಸ್ಥಾಪಿಸುವಂತೆ ಕೋರಿ ನಿರ್ದೇಶಕರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ- ಇವರಿಗೆ ಮನವಿ ಪತ್ರ ಬರೆಯಿರಿ. 4**

**IX. ನಿಮ್ಮ ಶಾಲೆಯಲ್ಲಿ ಆಚರಿಸಿದ 'ಕನ್ನಡ ರಾಜ್ಯೋತ್ಸವ' ದಿನದ ಕುರಿತು ವರದಿ ತಯಾರಿಸಿ. 4**

**X. ಕೊಟ್ಟಿರುವ ವಿಷಯಗಳಲ್ಲಿ ಒಂದನ್ನು ಕುರಿತು ಪ್ರಬಂಧ ಬರೆಯಿರಿ. 4**

1. ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ
2. ಗ್ರಂಥಾಲಯದ ಮಹತ್ವ
3. ನನ್ನ ನೆಚ್ಚಿನ ಪುಸ್ತಕ

## SECTION - D

### ಪದ್ಯಗಳ ಅಧ್ಯಯನ (28 ಅಂಕಗಳು)

**IX. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ. 4 x2=8**

1. ಮಳೆಗಾಲದ ಆರಂಭಕ್ಕೆ ಮುನ್ನ ಮಲೆನಾಡಿನಲ್ಲಿ ಏನೆಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಿತ್ತು?
2. ಸಿಡುಕಿನಿಂದ ಆಟೋ ಸ್ಟಾರ್ಟ್ ಮಾಡಿದ ಆಟೋ ಚಾಲಕ ಏನೆಂದು ಹೇಳಿದ?
3. ವ್ರಿಹಿಯನ್ನು ಯಾವ ಯಾವ ಮಂಗಳ ಕಾರ್ಯಗಳಲ್ಲಿ ಬಳಸಲಾಗುತ್ತದೆ?
4. ಯಾವುದು ಬತ್ತಿ ಹೋಗುವ ಮುನ್ನ ಹೊಸ ನಾಡೊಂದನ್ನು ಕಟ್ಟಬೇಕು? ನಮ್ಮೆದೆಯ ಕಾಮಧೇನು

**XII. ಈ ಕೆಳಗಿನ ಪ್ರಶ್ನೆಗಳಿಗೆ ೫-೬ ವಾಕ್ಯಗಳಲ್ಲಿ ಉತ್ತರಿಸಿ. 2x3=6**

1. ಸಳನ ವಂಶಕ್ಕೆ 'ಹೊಯ್ಸಳ ' ಎಂಬ ಹೆಸರು ಬರಲು ಕಾರಣವೇನು?
2. ಗೆಳೆಯರು ಹೇಗೆ ಬಾಳುತ್ತಾರೆ?

**XIII. ಈ ಕೆಳಗಿನ ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿ. 2x3=6**

1. " ನನಗೂ ಹೆಣ್ಣು ಮಕ್ಕಳಂತೆ ಉದ್ದ ಕೂದಲಿತ್ತು"

**ಅಥವಾ**

" ಎನಿದಚ್ಚರಿ ಎಂತುಟಾತ್ತರ್ಂ"

2. " ಕಂಡಕಂಡವರೇನು ಬಲ್ಲವರಿದನು"

**ಅಥವಾ**

" ಕಾಯಕವನೆ ಪ್ರಸಾದ ಕಾಯಕ ಮಾಡಿ ಸಲಹಿದರು"

**XIV. ಈ ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರಿಸಿ. 1x4=4**

1. ಮಲೆನಾಡಿನಲ್ಲಿ ಹುಲಿಗಳಿಂದಾಗುತ್ತಿದ್ದ ತೊಂದರೆಯ ಬಗ್ಗೆ ಹೇಗೆ ವರ್ಣಿಸಲಾಗಿದೆ?

**ಅಥವಾ**

ಮುದ್ದಣನು ಪರಿಹಾಸ ಮಾಡಿದನೆಂದು ಮನೋರಮೆಯು ಹೇಳಲು ಕಾರಣವೇನು?

**XV. ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರಿಸಿ. 1x4=4**

1. ಶ್ರೀ ರಾಮನು ನರೆದಲಗ ಹಾಗೂ ವ್ರಿಹಿಯನ್ನು ಸೆರೆಮನೆಗೆ ಹಾಕಲು ಕಾರಣವೇನು?

**ಅಥವಾ**

ಗೆಳೆತನದ ಮಹತ್ವವನ್ನು ಕಣವಿ ಅವರು ಹೇಗೆ ತಿಳಿಸಿದ್ದಾರೆ?

*******************************************